



(6ನೇ ಪುಟದಿಂದ)

ಭತ್ತದ ಹಸಿರಿಗೆ ಇನ್ನೊಂದು ರೀತಿಯ ಮೆರುಗು ನೀಡುತ್ತದೆ. ಹಸಿರ ಲೋಕದ ಮೂಲಕ ಹಾದು ಬರುವ ತಂಗಾಳಿಯು ಭತ್ತದ ಹೂವಿನ ಕಂಪನ್ನು ಬೀಸಿ ಹೊಸ ಚೇತನ ತುಂಬುತ್ತದೆ.

ಬೆಟ್ಟಗಳಂತೂ ಒಂದಿನಿತೂ ಜಾಗ ಬಿಡದೆ ಹಸಿರು ಚಾದರ ಹೊದ್ದು ಚಿತ್ತಾರ ಬಿಡಿಸಿರುತ್ತದೆ. ಅಲ್ಲಲ್ಲಿ ಮರದ ನೆರಳು ದಟ್ಟ ಹಸಿರಿನ ಹೊಸ ವಿನ್ಯಾಸದ ಕಲ್ಪನೆ ಮೂಡಿಸುತ್ತವೆ. ಛಾಯಾ ಚಿತ್ರಕಾರರಿಗೆ ಫ್ರೇಮ್ ಸಂಯೋಜಿಸುವ ಶ್ರಮವೇ ಇರುವುದಿಲ್ಲ. ಎಲ್ಲವೂ ತನ್ನಷ್ಟಕ್ಕೆ ತಾನೇ ಸಂಯೋಜನೆಗೊಂಡಿರುತ್ತದೆ. ಕ್ಯಾಮೆರಾ ಎತ್ತಿ ಕ್ಲಿಕ್ಕಿಸಿದರಾಯಿತು. ಇದು ಪ್ರಕೃತಿಯೇ ಸಂಯೋಜಿಸಿರುವ ಪೇಂಟಿಂಗ್!